ಕರ್ನಾಟಕ ವಿಧಾನ ಸಭೆ. ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: CM

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 18/12/9

# ಸಚಿವರ ಹಾಜರಾತಿ ಕಡ್ಡಾಯ ಸಿಎಂ ಚಿಂತನೆ

ಬೆಂಗಳೂರು: ವಿಧಾನಸೌಧ\ ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಸಚಿವರು ವಾರಕ್ಕೆ ಎರಡು ದಿನ ಕಡ್ಡಾಯವಾಗಿ ಹಾಜರಿರುವ ಪದ್ಧತಿಯನ್ನು ಜಾರಿಗೆ ತರಲು ಮುಖ್ಯಮಂತ್ರಿಗಳು ಚಿಂತನೆ ನಡೆಸಿದ್ದಾರೆ.

ಯಡಿಯೂರಪ್ಪ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಪದ್ಧತಿ ಜಾರಿಯಲ್ಲಿತ್ತು. ಪ್ರತಿ ಸೋಮವಾರ ಮತ್ತ ಗುರುವಾರ ಸಚಿವರು ಕಡ್ಡಾಯವಾಗಿ ತಮ್ಮ ಕಚೇರಿಯಲ್ಲಿ ಹಾಜ-ರಿದ್ದು ಶಾಸಕರು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡಬೇಕಿತ್ತು.

ವಿಧಾನಸೌಧ, ವಿಕಾಸಸೌಧದ ತಮ್ಮ ಕಚೇರಿಗಳಲ್ಲಿ ಸಚಿವರು ಸಿಗುತ್ತಿಲ್ಲ. ಅಧಿಕೃತ ನಿವಾಸಗಳಲ್ಲಿಯೂ ಸಿಗುತ್ತಿಲ್ಲ. ಇದರಿಂದ ಅವರನ್ನು ಭೇಟಿ ಮಾಡಿ ಕ್ಷೇತ್ರದ ಕೆಲಸ ಮಾಡಿಸಿಕೊಳ್ಳುವುದು ಕಷ್ಟವಾಗಿದೆ ಎಂದು ಆಡಳಿತ ಪಕ್ಷದ ಹಲವು ಶಾಸಕರು ದೂರಿರುವ ಹಿನ್ನೆಲೆಯಲ್ಲಿ ಈ ಪದ್ಧತಿ ಜಾರಿಗೆ ಮುಖ್ಯಮಂತ್ರಿಗಳು ನಿರ್ಧರಿಸಿದ್ದಾರೆ. ಆದರೆ ಇದು ಸಂಪುಟ ವಿಸ್ತರಣೆ ನಂತರ ಜಾರಿಗೆ ಬರಲಿದೆ.